Approved by the Department of Public Instruction

# ಕರ್ನಾಟಕ ಸ್ಕೌಟ್ ಮತ್ತು ಗೈಡ್

# The Karnataka Scout and Guide

Vol. 71 NOVEMBER—1988 No. 8




Indira Gandhi Award for National Integration for 1987
to Bharat Scouts and Guides.
By
The Prime Minister Sri Rajeev Gandhi to Sardar Laxman Singh, National Commissioner.

Annual Subscription Rs. 10/- only

PUBLISHED BY

**The Bharat Scouts & Guides, Karnataka State**
Prof. P. Sivashankar Circle, Kondajji Basappa Road
Fort, Bangalore - 560 002

## *Citation contd. from Last cover page*

Bharat Scouts & Guides, since its inception, has been pursuing programmes to shape and sculpture the mind of the young Indian for identifying himself or herself with the Indian Society, its ethos, its problems and their solutions. Adult education programmes, cleanliness drive, anti-leprosy, intellectual programmes like seminars–all these have a major thrust towards these goals of awareness and service.

The year 1987 has been a year of special activities for the Bharat Scouts & Guides. The year started with 11th Asia-Pecific Jamboree at Hyderabad from January 3 to 9 with the theme "Towards Integration and Peace" in which 15,000 Scouts and Guides from all over India and 12 overseas contingents participated.

During this year, 21 types of Peace and Integration activities were identified and pursued by the Bharat Scouts & Guides. National Integration Rallies, National Integration Camps, Community Singing Courses, All-Faith Prayer Meetings, peace marches, peace seminars, Inter-State Study Tours, cultural exchanges, youth forums, rover ranger Samagam, cub/bulbul utsavs, camps for appreciation of religions and languages and competitions in painting, elocutions, essay writing, cartoon drawing on subjects of peace and integration. Mass national integration rallies, 1,500 to 4,000 strong, were held in Punjab, Maharashtra, Madhya Pradesh, Andhra Pradesh, Karnataka, Kerala, Tamil Nadu and Goa. In Punjab, Scouting was at its best. Young Scouts and Guides remained busy in peace marches, community singing and integration activities. Scouting activities were spread as far as border areas of Jammu & Kashmir. Lakhs of Scouts & Guides interacted all through the year bringing in a new awareness in rural and urban masses all over the country.

In appreciation of the work of the organisation, the Secretary-General of the United Nations conferred the "Peace Messenger Award" on the Bharat Scouts & Guides on the International Peace Day in September 1987. This is the only National Organisation in the Scout/Guide world to be called the "Peace Messenger".

The United Nations has also given the Bharat Scouts & Guides a Consultative status and invited it for participation in the Consultative Committee meetings on "The future of Child and Peace" in the U. N. Headquarters in June, 1988.

In recognition of its services, the late Prime Minister, Smt. Indira Gandhi had permitted Bharat Scouts & Guides to annually award a certificate in the name of "Prime Minister's Shield Competition" for very active groups in the area of Community Service and Communal Harmony. The Prime Minister signs the certificates and issues the same to the best individuals and units in the country every year.

Honouring the movement, in fact, implies honouring the youth of the country as an integrated force. The conferment of the Indira Gandhi Award for the year 1987 to the Bharat Scouts & Guides is a token of the recognition of its selfless service and relentless pursuit of the goals of national integration.

---

*IN THIS ISSUE —*

### ಕನ್ನಡ ವಿಭಾಗ



### ENGLISH SECTION

# ಹೆಮ್ಮೆ — ಹೊಣೆಗಾರಿಕೆ

ಹತ್ತು ಜನರ ಮಧ್ಯೆ ಒಳ್ಳೆಯವರೆನಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಅತ್ಯಂತ ಎಚ್ಚರದಿಂದ ನಡೆದರೆ ಮಾತ್ರ ಅದು ಸಾಧ್ಯ. ಅದರಲ್ಲೂ ರಾಷ್ಟ್ರಮಟ್ಟದಲ್ಲಿ ಹೆಸರನ್ನು ಗಳಿಸುವುದೆಂದರೆ, ಅದರ ಹಿಂದೆ ಅಪಾರ ಶ್ರಮ ಮತ್ತು ಶ್ರದ್ಧೆಗಳಿರಬೇಕಾಗುತ್ತದೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಷ್ಟ್ರೀಯ ಸಂಸ್ಥೆ ಈಗ ಅಂತಹ ಒಂದು ಹೆಸರನ್ನು ಪಡೆದಿದೆ. ರಾಷ್ಟ್ರಮಟ್ಟದಲ್ಲಿ 'ಸ್ಕೌಟ್ಸ್ ಮತ್ತು ಗೈಡ್ಸ್' ಹೆಸರಾಗಿರ ಬಹುದು. ಆದರೆ ಈಗ ದೊರೆತ ಹೆಸರು ಮಾತ್ರ ಸ್ಮರಣೀಯವಾದುದು, ಅಭಿಮಾನಪೂರ್ಣವಾದುದು; ಸಾರ್ಥಕವಾದುದು !

ರಾಷ್ಟ್ರಾದ್ಯಂತ ಹಬ್ಬಿಕೊಂಡಿರುವ ನಮ್ಮ ಚಳುವಳಿಯ ಹೆಮ್ಮೆಯ ಟೊಪ್ಪಿಗೆಗೆ ಈಗ ಹರ್ಷದ ಗರಿಯನ್ನು ಸಿಕ್ಕಿಸಿದಂತಾಗಿದೆ. ಆ ಹರ್ಷದ ಗರಿಯೇ 1987ರ 'ಇಂದಿರಾ ಗಾಂಧಿ ಪ್ರಶಸ್ತಿ'. ರಾಷ್ಟ್ರೀಯ ಭಾವೈಕ್ಯತೆ ಮತ್ತು ಸಮಗ್ರತೆಗಾಗಿ ಗಣನೀಯ ಪಾತ್ರ ವಹಿಸುವ ವ್ಯಕ್ತಿ ಅಥವಾ ಸಂಸ್ಥೆಗಳಿಗೆ ನೀಡಲಾಗುವ ಈ ಪ್ರತಿಷ್ಠಿತ ರಾಷ್ಟ್ರೀಯ ಪ್ರಶಸ್ತಿಗೆ ನಮ್ಮ ಚಳುವಳಿ ಅರ್ಹವಾದುದು ಸಹಜವಾಗಿಯೇ ಅಭಿಮಾನವುಂಟುಮಾಡುತ್ತದೆ.

ರಾಷ್ಟ್ರೀಯ ಸಾಮರಸ್ಯ ಮತ್ತು ಭಾವೈಕ್ಯತೆಗಾಗಿ ತಮ್ಮನ್ನೇ ಅರ್ಪಣೆಮಾಡಿಕೊಂಡಿದ್ದ ದಿವಂಗತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ಹೆಸರಿನಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ (ಐ) ತನ್ನ ಶತಮಾನೋತ್ಸವ ವರ್ಷಾಚರಣೆಯ ಸಂದರ್ಭದಲ್ಲಿ ಈ ರಾಷ್ಟ್ರೀಯ ಭಾವೈ ಕ್ಯತಾ ಪ್ರಶಸ್ತಿಯನ್ನು ಆರಂಭಿಸಿತು. ಈ ವಾರ್ಷಿಕ ಪ್ರಶಸ್ತಿಗೆ ಅರ್ಹ ವ್ಯಕ್ತಿ ಅಥವಾ ಸಂಸ್ಥೆಯನ್ನು ಆರಿಸಲು ಕಲೆ, ವಿಜ್ಞಾನ, ಸಂಸ್ಕೃತಿ, ಶಿಕ್ಷಣ, ಸಾಹಿತ್ಯ, ಧರ್ಮ, ಸಾಮಾಜಿಕ ಕ್ಷೇತ್ರ, ಪತ್ರಿಕಾರಂಗ, ಕಾನೂನು ಮತ್ತು ಸಾರ್ವಜನಿಕ ಕ್ಷೇತ್ರಗಳನ್ನು ಪ್ರತಿನಿಧಿಸುವ ಪ್ರಮುಖರ ಒಂದು ಸಲಹಾ ಸಮಿತಿ ಇದೆ. ಭಾರತ ರಾಷ್ಟ್ರೀಯ ಕಾಂಗ್ರೆಸ್ (ಐ) ಸಂಸ್ಥೆಯ ಅಧ್ಯಕ್ಷರು ಈ ಉನ್ನತ ಸಮಿತಿಯನ್ನು ನೇಮಿಸುತ್ತಾರೆ.

ಭಾರತದ ಪರಂಪರೆ, ಭಾಷೆ, ಸಂಸ್ಕೃತಿ, ವಿವಿಧ ಜನಾಂಗ, ಸಮಾಜ ಮತ್ತು ಧಾರ್ಮಿಕ ಗುಂಪುಗಳ ಮಧ್ಯೆ ಸಾಮರಸ್ಯ ಉಂಟುಮಾಡಿ ರಾಷ್ಟ್ರದ ಸಮಗ್ರತೆಗೆ ನೆರವಾಗುವಂತಹ ಕಾರ್ಯಚಟುವಟಿಕೆಗಳನ್ನು ನಡೆಸುವ ವ್ಯಕ್ತಿ ಅಥವಾ ಸಂಸ್ಥೆಗಳು ಈ ಪ್ರಶಸ್ತಿಗೆ ಅರ್ಹವಾಗು ತ್ತವೆ. 1985ರಲ್ಲಿ ಆರಂಭವಾದ ಈ ವಾರ್ಷಿಕ ಪ್ರಶಸ್ತಿಯನ್ನು ಇದುವರೆಗೆ ಶ್ರೀ ಸ್ವಾಮಿ ರಂಗನಾಥಾ ನಂದಜಿ ಅವರು ಮತ್ತು ಶ್ರೀಮತಿ ಅರುಣಾ ಅಸಫ್ ಆಲಿ ಅವರು ಪಡೆದಿದ್ದಾರೆ. ಸಾಂಸ್ಥಿಕವಾಗಿ ಪ್ರಶಸ್ತಿ ಪಡೆದ ಮೊದಲ ಅಭಿಮಾನ ನಮ್ಮದು. ಪ್ರಶಸ್ತಿಯು ಒಂದು ಲಕ್ಷ ರೂ. ನಗದು ಹಣ ಮತ್ತು ಪ್ರಶಸ್ತಿ ಪತ್ರದ ರೂಪದಲ್ಲಿರುತ್ತದೆ.

1987ರ ಇಂದಿರಾ ಗಾಂಧಿ ಪ್ರಶಸ್ತಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ, ಅತ್ಯಂತ ಹೆಮ್ಮೆಯುಂಟು ಮಾಡಿರುವಂತೆಯೇ ಈ ಚಳುವಳಿಯಲ್ಲಿರುವ ಪ್ರತಿ ಯೊಬ್ಬರ ಮೇಲೂ ಅಷ್ಟೇ ಹೆಚ್ಚಿನ ಹೊಣೆಗಾರಿಕೆ ಯನ್ನು ಹೊರಿಸಿದೆ ಎಂಬುದನ್ನು ನಾವು ಮರೆಯು ವಂತಿಲ್ಲ. ರಾಷ್ಟ್ರಮಟ್ಟದ ಒಂದು ಉನ್ನತ ಮನ್ನಣೆಗೆ ಪಾತ್ರರಾದ ಮೇಲೆ ಆ ಎತ್ತರಕ್ಕೆ ತಕ್ಕಂತೆ ನಮ್ಮ ಕಾರ್ಯ ಚಟುವಟಿಕೆಗಳು ನಡೆಯಬೇಕು. ಅಂತೇ ಚಳು ವಳಿಗೆ ಸಂಬಂಧಿಸಿದ ಸರ್ವರೂ ಇದನ್ನು ಗಮನದಲ್ಲಿಟ್ಟು ಕೊಂಡು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಧ್ವಜ ಸದಾ ಹೆಮ್ಮೆಯಿಂದ ಹಾರಾಡುತ್ತಿರುವಂತೆ ಮಾಡ ಬೇಕಾಗಿ ಕೋರಿದೆ.

ಈ ಸಲ ನಮ್ಮ ಚಳುವಳಿಗೆ ದೊರೆತಿರುವ ಪ್ರಶಸ್ತಿಯು ಮುಂಬರುವ ವರ್ಷಗಳಲ್ಲಿ ನಾವು ಇನ್ನೂ ಹೆಚ್ಚು ಶ್ರಮ ಪಟ್ಟು ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ ಅನುಗುಣ ವಾಗಿ ದುಡಿಯಲು ಪ್ರೇರಣೆಯಾಗಬೇಕು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಷ್ಟ್ರೀಯ ಸಂಸ್ಥೆಯು ಈ ಪ್ರಶಸ್ತಿ ಪಡೆಯಲು ಕಾರಣರಾದ ಪ್ರತಿ ಯೊಬ್ಬ ಸ್ಕೌಟ್ ಮತು ಗೈಡ್ ಸದಸ್ಯರಿಗೂ ನಮ್ಮ ಅಭಿನಂದನೆಗಳು.

— ಸಂಪಾದಕ

# ಪ್ರತ್ಯಕ್ಷ ಸೇವೆ: ಪ್ರತಿಷ್ಠಿತ ಪ್ರಶಸ್ತಿ

## ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ಇಂದಿರಾ ಗಾಂಧಿ ಪ್ರಶಸ್ತಿಯ ಗೌರವ

ಎಂಭತ್ತು ವರ್ಷಗಳ ತನ್ನ ಸ್ಮರಣೀಯ ಬದುಕಿನಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಇದೇ 1988ರ ಅಕ್ಟೋಬರ್ 31ರಂದು ಹೊಸದೊಂದು ದಾಖಲೆಯನ್ನು ಪಡೆಯಿತು.

ರಾಷ್ಟ್ರೀಯ ಭಾವೈಕ್ಯತೆಗಾಗಿ ಸಲ್ಲಿಸಿದ ಗಣನೀಯ ಸೇವೆಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ಅಂದು 1987ರ ಇಂದಿರಾ ಗಾಂಧಿ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಲಾಯಿತು.

ನವದೆಹಲಿಯ ಮೌಲಾನ ಅಜಾದ್ ರಸ್ತೆಯಲ್ಲಿರುವ ವಿಜ್ಞಾನ ಭವನದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭ ನಿಜಕ್ಕೂ ಒಂದು ಹೃದಯಸ್ಪರ್ಶಿ ಸಂದರ್ಭವಾಗಿತ್ತು. ಗಂಧರ್ವ ಮಹಾವಿದ್ಯಾಲಯದವರ ಪ್ರಾರ್ಥನೆಯೊಂದಿಗೆ ಆರಂಭವಾದ ಸಮಾರಂಭಕ್ಕೆ ಆಗಮಿಸಿದ್ದ ಸ್ಕೌಟ್ ಮತ್ತು ಗೈಡ್ ಅಭಿಮಾನಿಗಳಿಗೆ ಸಲಹಾ ಸಮಿತಿ ಅಧ್ಯಕ್ಷ ಶ್ರೀ ಪಿ. ವಿ. ನರಸಿಂಹರಾವ್ ಅವರು ಸ್ವಾಗತ ಕೋರಿ, ರಾಷ್ಟ್ರೀಯ ಭಾವೈಕ್ಯತೆ ಮತ್ತು ಸಮಗ್ರತೆಗಾಗಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಕಾಣಿಕೆಯನ್ನು ಗುರುತಿಸಿ ಈ ಪ್ರತಿಷ್ಠಿತ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಲಾಗಿದೆ ಎಂದು ಘೋಷಿಸಿದರು.

ಪ್ರಶಸ್ತಿ ಪ್ರದಾನಮಾಡಿದ ಭಾರತದ ಪ್ರಧಾನಿಯವರು, ರಾಷ್ಟ್ರೀಯ ಭಾವೈಕ್ಯತೆಗೆ ಭಾರತ್ ಸ್ಕೌಟ್ ಮತ್ತು ಗೈಡ್‌ಗಳು ಸಲ್ಲಿಸಿರುವ ಸೇವೆ ಮಹತ್ವಪೂರ್ಣವೆಂದು ತಿಳಿಸಿ, ಈ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದುದಕ್ಕಾಗಿ ಹಾರ್ದಿಕವಾಗಿ ಅಭಿನಂದಿಸಿದರು.

ಆ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಿಯವರು ದೇಶದ ಸಮಗ್ರತೆಗೆ ಕೆಲವರ ಸಂಕುಚಿತ ಮನೋಭಾವನೆಯೇ ಒಂದು ದೊಡ್ಡ ಆತಂಕವಾಗಿದೆಯೆಂದು ತಿಳಿಸಿ ಜಾತಿ, ಮತ ಭೇದಗಳನ್ನು ಕಿತ್ತುಹಾಕಬೇಕೆಂದೂ ವಿಧ್ವಂಸಕ ಚಟುವಟಿಕೆಗಳಿಗೆ ಅವಕಾಶ ಕೊಡಬಾರದೆಂದೂ ರಾಷ್ಟ್ರದ ಜನತೆಗೆ ಕರೆ ನೀಡಿದರು.

ಭಾರತೀಯ ನಾಗರೀಕತೆಯಲ್ಲಿ ಅಂತರ್ಗತವಾಗಿ ಕಳೆದ 5,000 ವರ್ಷಗಳಿಂದ ಬೆಳೆದು ಬಂದಿರುವ ಮುಕ್ತ ಮನೋಭಾವನೆಯನ್ನು ಸ್ಮರಿಸಿದ ಪ್ರಧಾನಿಯವರು ಧರ್ಮದ ಹೆಸರಿನಲ್ಲಿ ಜನರ ಭಾವನೆಗಳನ್ನು ಕೆರಳಿಸಿ ಒಡಕುಂಟುಮಾಡುವುದು ಸಲ್ಲದೆಂದು ಹೇಳಿದರು. ಉನ್ನತ ಮೌಲ್ಯಗಳು ಎಲ್ಲಿಂದಲೇ ಬಂದರೂ ಅವುಗಳನ್ನು ಮುಕ್ತಮನಸ್ಸಿನಿಂದ ಸ್ವೀಕರಿಸುವ ವಿಶೇಷ ಗುಣ ಭಾರತೀಯರದೆಂದು ತಿಳಿಸಿದ ಪ್ರಧಾನಿಯವರು ಈ ನಾಗರೀಕತೆಗೆ ವಿಶ್ವದ ಯಾವುದೇ ನಾಗರೀಕತೆಯನ್ನು ಹೋಲಿಸಲಾಗುವುದಿಲ್ಲ ಎಂದರು.

ಭಾರತ್ ಸ್ಕೌಟ್ ಮತ್ತು ಗೈಡ್‌ಗಳು ರಾಷ್ಟ್ರದ ಉನ್ನತ ಪರಂಪರೆಗೆ ಅನುಗುಣವಾಗಿ ಪರಸ್ಪರ ಕೂಡಿ ಕೆಲಸಮಾಡಲೆಂದು ಆಶಿಸಿ, ದಿವಂಗತ ಇಂದಿರಾ ಗಾಂಧಿ ಅವರು ನಂಬಿದ್ದ ಮೌಲ್ಯಗಳ ಸಂಕೇತವೇ ಈ ರಾಷ್ಟ್ರೀಯ ಪ್ರಶಸ್ತಿ ಎಂದು ತಿಳಿಸಿದರು.

ಪ್ರಶಸ್ತಿಯನ್ನು ಸ್ವೀಕರಿಸಿದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮಹಾಸಂಸ್ಥೆಯ ರಾಷ್ಟ್ರೀಯ ಆಯುಕ್ತ ಸರ್ದಾರ್ ಲಕ್ಷ್ಮಣ ಸಿಂಗ್ ಅವರು ಭಾರತದ ಪ್ರಧಾನಿಗಳು ಮೊದಲಿನಿಂದಲೂ ಸ್ಕೌಟ್ ಮತ್ತು ಗೈಡ್ ಚಳುವಳಿಗೆ ನೀಡುತ್ತಾ ಬಂದಿರುವ ಉತ್ತೇಜನವನ್ನು ಸ್ಮರಿಸಿದರು. ದಿವಂಗತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಸ್ಕೌಟ್ ಮತ್ತು ಗೈಡುಗಳು ರಾಷ್ಟ್ರ ಸೇವೆಯಲ್ಲಿ ಮಹತ್ವದ ಪಾತ್ರ ವಹಿಸಬೇಕೆಂಬ ಆಶಯದಿಂದ ರಾಷ್ಟ್ರ ಮಟ್ಟದ ಸ್ಪರ್ಧೆಯೊಂದಕ್ಕೆ ಪ್ರೋತ್ಸಾಹ ನೀಡಿದ ವಿಷಯವನ್ನು ಪ್ರಸ್ತಾಪಿಸಿ, ಅವರ ಆಶಯಕ್ಕೆ ಅನುಗುಣವಾಗಿ ಚಳುವಳಿಯು ಬೆಳೆಯುತ್ತಿರುವುದಕ್ಕೆ ಅಭಿಮಾನ ಪಟ್ಟುಕೊಂಡರಲ್ಲದೆ, ಈ ಪ್ರತಿಷ್ಠಿತ ಪ್ರಶಸ್ತಿಗಾಗಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯನ್ನು ಆರಿಸಿದ್ದಕ್ಕಾಗಿ ಕೃತಜ್ಞತೆ ವ್ಯಕ್ತಪಡಿಸಿದರು.

ಶ್ರೀ ಸರ್ದಾರ್ ಲಕ್ಷ್ಮಣ ಸಿಂಗ್ ಅವರು ಪ್ರಧಾನಿ ಶ್ರೀ ರಾಜೀವ ಗಾಂಧಿ ಅವರಿಗೆ ಸ್ಕೌಟ್ ಚಳುವಳಿಯ ಕೊರಳ ವಸ್ತ್ರವೊಂದನ್ನು ಉಡುಗೊರೆಯಾಗಿ ನೀಡಿದರು.

ವಿಶ್ವ ಸ್ಕೌಟ್ ಮತ್ತು ಗೈಡ್ ಚಳುವಳಿಯಲ್ಲಿ ತನ್ನದೇ ಆದ ಗೌರವಾನ್ವಿತ ಸ್ಥಾನವನ್ನು ಗಳಿಸಿರುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ 1987ರ ಇಂದಿರಾ ಗಾಂಧಿ ಪ್ರಶಸ್ತಿಯಿಂದಾಗಿ ಆ ಸ್ಥಾನದ ಹಿರಿಮೆಯನ್ನು ಮತ್ತಷ್ಟು ಹೆಚ್ಚಿಸಿಕೊಂಡಂತಾಗಿದೆ. ಇದು ಭಾರತಾದ್ಯಂತ ಇರುವ 17 ಲಕ್ಷ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಲ್ಲಿ ಪ್ರತಿಯೊಬ್ಬರಿಗೂ ಸಂದ ಗೌರವವಾಗಿದೆ.

(ದಿನಾಂಕ 31-10-1988ರಂದು ನವದೆಹಲಿಯಲ್ಲಿ ಭಾರತದ ಪ್ರಧಾನಿಯವರಿಂದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಷ್ಟ್ರೀಯ ಆಯುಕ್ತರಾದ ಸರ್ದಾರ್ ಲಕ್ಷಣ್‌ಸಿಂಗ್ ಅವರು 1987ರ ಇಂದಿರಾಗಾಂಧಿ ಪ್ರಶಸ್ತಿಯನ್ನು ಸ್ವೀಕರಿಸಿದಾಗ ಮಾಡಿದ ಭಾಷಣ).

# 1987ರ ಇಂದಿರಾ ಗಾಂಧಿ ಪ್ರಶಸ್ತಿ

## ಸ್ವೀಕಾರ ಭಾಷಣ — ಸರ್ದಾರ್ ಲಕ್ಷ್ಮಣ ಸಿಂಗ್,

### ರಾಷ್ಟ್ರೀಯ ಕಮಿಷನರ್

ಗೌರವಾನ್ವಿತ ಪ್ರಧಾನ ಮಂತ್ರಿಗಳೇ, ಸಲಹಾ ಸಮಿತಿ ಅಧ್ಯಕ್ಷರಾದ ಶ್ರೀ ಪಿ. ವಿ. ನರಸಿಂಹರಾವ್ ಅವರೇ, ಕೇಂದ್ರ ಹಣಕಾಸು ಸಚಿವರೂ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಅಧ್ಯಕ್ಷರೂ ಆದ ಶ್ರೀ ಎಸ್. ಬಿ. ಚವ್ಹಾಣ್ ಅವರೇ, ಸನ್ಮಾನ್ಯರೇ ಮತ್ತು ಸ್ನೇಹಿತರೇ,

ರಾಷ್ಟ್ರೀಯ ಭಾವೈಕ್ಯತೆ ಮತ್ತು ಉತ್ತಮ ಸಾಮರಸ್ಯಕ್ಕಾಗಿ ಸ್ಕೌಟ್ ಮತ್ತು ಗೈಡ್‌ಗಳು ಭಾರತಾದ್ಯಂತ ನಡೆಸಿದ ನಿರಂತರ ಹಾಗೂ ಗಣನೀಯ ಪ್ರಯತ್ನಗಳಿಗಾಗಿ 1987ರ 'ಇಂದಿರಾ ಗಾಂಧಿ ಪ್ರಶಸ್ತಿ'ಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯನ್ನು ಗುರುತಿಸಿರುವುದಕ್ಕಾಗಿ ಸಂಬಂಧಪಟ್ಟ ಸಲಹಾ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರಿಗೆ ನಾವು ನಿಜಕ್ಕೂ ಕೃತಜ್ಞರಾಗಿದ್ದೇವೆ. ಈ ಪ್ರತಿಷ್ಠಿತ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆಯಲು ನಮಗೆ ಅತ್ಯಂತ ಹೆಮ್ಮೆಯೆನಿಸಿದೆ. ರಾಷ್ಟ್ರದ ಪ್ರತಿಯೊಬ್ಬ ಸ್ಕೌಟ್ ಮತ್ತು ಗೈಡ್ ಸಹ ಇಂದು ಸನ್ಮಾನಿತರಾದ ಭಾವನೆಯನ್ನು ತಾಳಿದ್ದಾರೆ.

"ಭಾರತದಲ್ಲಿರುವ ಪ್ರತಿಯೊಂದು ಮನೆಯೂ ಸ್ಕೌಟ್ ಮಕ್ಕಳಂತಹ ಮಕ್ಕಳನ್ನು ಪಡೆಯುವಂತಾಗಲೆಂದು ನಾನು ಹಾರೈಸುತ್ತೇನೆ" ಎಂದು ಸ್ಕೌಟ್ ಶಿಬಿರವೊಂದರಲ್ಲಿ ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ ಬಾಪೂಜಿ ಹೇಳಿದ್ದರು.

"ನನಗೆ ಒಂದು ವೇಳೆ ಒಂದು ಡಜನ್ ಮಕ್ಕಳಿದ್ದಿದ್ದರೆ — ನನಗಿರುವುದು ಒಂದೇ ಮಗು ಎನ್ನಿ — ನಾನು ಅವರನ್ನೆಲ್ಲ ಸ್ಕೌಟ್ ಚಳುವಳಿಗೆ ಕಳುಹಿಸುತ್ತಿದ್ದೆ; ಹಾಗೆಯೇ, ಹೆಣ್ಣುಮಕ್ಕಳನ್ನೆಲ್ಲ ಗರ್ಲ್ ಗೈಡುಗಳಾಗಿ ಮಾಡುತ್ತಿದ್ದೆ. ಏಕೆಂದರೆ, ಅವರು ರಾಷ್ಟ್ರಕ್ಕಾಗಿ ದುಡಿಯಲು, ರಾಷ್ಟ್ರಕ್ಕಾಗಿ ಬದುಕಲು ಸದಾ ಸಿದ್ಧರಾಗಿರುವ ಒಳ್ಳೆಯ ನಾಗರೀಕರು." ಎಂದು ಮಹಾನ್ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಮೇಡಂ (ಡಾ॥) ಅನ್ನಿಬೆಸೆಂಟ್ ಅವರು ಹೇಳಿದ್ದರು.

"ಸ್ಕೌಟ್ ಮತ್ತು ಗೈಡುಗಳು ಅತ್ಯಂತ ಮಹತ್ವದ ಸರಕು ಎಂದು ನಾನು ಭಾವಿಸಿದ್ದೇನೆ. ಈ ಚಳುವಳಿ ಎಷ್ಟು ವಿಸ್ತರಿಸಿದರೆ ರಾಷ್ಟ್ರಕ್ಕೆ ಅಷ್ಟು ಒಳ್ಳೆಯದು" ಎಂದು ಪಂಡಿತ ಜವಾಹರಲಾಲ್ ನೆಹರೂ ಅವರು ಹೇಳಿದ್ದರು.

ದಿವಂಗತ ಪೂಜ್ಯ ಶ್ರೀಮತಿ ಇಂದಿರಾ ಗಾಂಧಿ ಅವರಂತೂ ತಾವು ಪ್ರಧಾನ ಮಂತ್ರಿಯಾಗಿದ್ದ ಅವಧಿಯಲ್ಲಿ, ಈ ಚಳುವಳಿಯನ್ನು ಯುವಜನಾಂಗದಲ್ಲಿ ಬಲಗೊಳಿಸಲು ಸಾಕಷ್ಟು ಶ್ರಮಿಸಿದರು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಅಖಿಲ ಭಾರತ ಮಟ್ಟದಲ್ಲಿ ಸ್ಪರ್ಧೆಯೊಂದನ್ನು ಆರಂಭಿಸಲು ಅವರು ಪ್ರೋತ್ಸಾಹ ನೀಡಿದರು. ರಾಷ್ಟ್ರ ಸೇವೆಯಲ್ಲಿ ಸ್ಕೌಟ್ ಮತ್ತು ಗೈಡ್‌ಗಳು ಉಪಯುಕ್ತ ಪಾತ್ರ ವಹಿಸುವಂತೆ ಅವರನ್ನು ಪ್ರೇರೇಪಿಸುವುದು ಆ ಸ್ಪರ್ಧೆಯ ಆಶಯವಾಗಿದೆ. ಶ್ರೀಮತಿ ಇಂದಿರಾ ಗಾಂಧಿ ಅವರು ಆ ಸ್ಪರ್ಧೆಗೆ ತಮ್ಮ ಗೌರವಾನ್ವಿತ ಕಾರ್ಯಾಲಯದ ಹೆಸರನ್ನು ಬಳಸಿಕೊಳ್ಳಲು ಅವಕಾಶ ನೀಡಿದ್ದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ನಾಲ್ಕು ಪ್ರಮುಖ ಕ್ಷೇತ್ರಗಳಲ್ಲಿ ಕೈಗೊಂಡ ವಾಸ್ತವಿಕ ಸೇವಾ ಯೋಜನೆಗಳೆಂದರೆ —

1. ಸಮುದಾಯ ಅಭಿವೃದ್ಧಿ ಕಾರ್ಯಕ್ರಮಕ್ಕೆ ಸಂಬಂಧಿಸಿದ ಚಟುವಟಿಕೆಗಳು ಅಥವಾ ಪರಿಸರ ಸ್ವಚ್ಛತೆಯ ನಿರ್ವಹಣೆ ಮತ್ತು ಹಸಿರು ಸಂರಕ್ಷಣೆಗಾಗಿ ಚಳುವಳಿ;

2. ಅನಿಷ್ಟಕಾರಕ ಪದ್ಧತಿಗಳು ಮತ್ತು ಪೂರ್ವಾಗ್ರಹಗಳ ವಿರುದ್ಧ ಚಳುವಳಿ;

3. ಪ್ರಾಣಿಗಳು ಮತ್ತು ವನ್ಯಜೀವಿಗಳ ರಕ್ಷಣೆಗಾಗಿ ಚಳುವಳಿ; ಮತ್ತು

4. ರೋವರ್ಸ್ ರೇಂಜರುಗಳಿಗಾಗಿ (18–25 ವಯಸ್ಸಿನ ಗುಂಪು) ಕುಟುಂಬ ಜೀವನ ಶಿಕ್ಷಣ ಮತ್ತು

ಕುಟುಂಬ ಕಲ್ಯಾಣಯೋಜನೆಗಳಲ್ಲಿ ಪ್ರೇರಣಾ ಕಾರ್ಯಕ್ರಮ.

ದಿವಂಗತ ಪ್ರಧಾನಿಯವರಿಗೆ ಬಿಡುವಿಲ್ಲದ ಕಾರ್ಯಭಾರಗಳಿದ್ದರೂ, ಬಿಡುವು ಮಾಡಿಕೊಂಡು, ಸ್ಕೌಟ್ಸ್ ಮತ್ತು ಗೈಡ್ಸ್ ಶಿಬಿರಗಳು ಮತ್ತು ಜಾಂಬೂರಿಗಳಿಗೆ ಭೇಟಿ ನೀಡಿ ಮಕ್ಕಳ ಕ್ಷೇಮ ವಿಚಾರಿಸುತ್ತಿದ್ದರು. ರಾಷ್ಟ್ರೀಯ ಭಾವೈಕ್ಯತೆ ಮತ್ತು ಸಮಗ್ರತೆಗಾಗಿ ಬದುಕಿ ತಮ್ಮ ಪ್ರಾಣವನ್ನೇ ತೆತ್ತ ಶ್ರೀಮತಿ ಇಂದಿರಾ ಗಾಂಧಿ ಅವರು ಈ ಮಹಾನ್ ರಾಷ್ಟ್ರದ ಸ್ಕೌಟ್ ಮತ್ತು ಗೈಡ್‌ಗಳಿಗೆ ಒಂದು ಅನುಸರಣೀಯ ಆದರ್ಶವಾಗಿ ಸದಾಕಾಲ ಉಳಿಯುತ್ತಾರೆ.

ಮಾನ್ಯ ಪ್ರಧಾನಿಯವರೆ, ತಾವು ನಮ್ಮ ಚಳುವಳಿಗೆ ಮತ್ತಷ್ಟು ಚೈತನ್ಯ ನೀಡಿದ್ದೀರಿ. ಅದರ ಪರಿಣಾಮವಾಗಿ ನಾವೀಗ ಇಡೀ ರಾಷ್ಟ್ರದಲ್ಲಿ ಸಮವಸ್ತ್ರದ ಸ್ವಯಂಸೇವಾ ಚಳುವಳಿಯ ಅತ್ಯಂತ ದೊಡ್ಡ ಸಂಸ್ಥೆಯಾಗಿ ಬೆಳೆದಿದ್ದೇವೆ. 1984ರಲ್ಲಿ 9,85,893ರಷ್ಟಿದ್ದ ನಮ್ಮ ಸ್ಕೌಟ್ ಮತ್ತು ಗೈಡ್‌ಗಳ ಸಂಖ್ಯಾಬಲ ಶೇಕಡ 70ರಷ್ಟು ಹೆಚ್ಚಿದೆ. ನಾವೀಗ 17 ಲಕ್ಷದಷ್ಟಿದ್ದೇವೆ. ರಾಜ್ಯ ಸರ್ಕಾರಗಳು ಮತ್ತು ಮಕ್ಕಳ ಪೋಷಕರೇ ಅಲ್ಲದೇ, ರೈಲ್ವೆ, ಸ್ಥಳೀಯ ಸಂಸ್ಥೆಗಳು, ಮಂಡಳಿಗಳು ಮತ್ತು ಕೈಗಾರಿಕೋದ್ಯಮಗಳು ಸ್ಕೌಟ್ ಮತ್ತು ಗೈಡ್ ಘಟಕಗಳನ್ನು ಆರಂಭಿಸಲು ಹೆಚ್ಚುಹೆಚ್ಚಾಗಿ ಮುಂದೆ ಬರುತ್ತಿವೆ.

ನಮ್ಮ ಚಳುವಳಿಯ ಮಹಾ ಪೋಷಕರಾದ ರಾಷ್ಟ್ರಪತಿ ಶ್ರೀ ಆರ್. ವೆಂಕಟರಾಮನ್ ಅವರು, ಪೋಷಕರಾದ ಉಪರಾಷ್ಟ್ರಪತಿ ಶ್ರೀ ಶಂಕರ ದಯಾಳ್ ಶರ್ಮ ಅವರು, ನಮ್ಮ ಸಂಸ್ಥೆಯ ಅಧ್ಯಕ್ಷರೂ, ಕೇಂದ್ರ ಹಣಕಾಸು ಸಚಿವರೂ ಆದ ಶ್ರೀ ಎಸ್. ಬಿ. ಚವ್ಹಾಣ್ ಅವರು ನಮ್ಮ ಕಾರ್ಯಚಟುವಟಿಕೆಗಳಲ್ಲಿ ಸ್ಫೂರ್ತಿ ಮತ್ತು ಪ್ರೋತ್ಸಾಹದ ಒಂದು ಮೂಲವಾಗಿದ್ದಾರೆ.

ನಮ್ಮ ಉದ್ದೇಶಗಳು ಉದಾತ್ತ, ವಿಧಾನಗಳು ವ್ಯವಹಾರಿಕ ಮತ್ತು ಸಮನ್ವಯ ಸಾರ್ವತ್ರಿಕ. ಈ ಚಳುವಳಿ ಒಂದು ಸಂಘಟನೆಯಾಗಿ ತನ್ನ ಕಾರ್ಯಕ್ರಮ ಮತ್ತು ತರಬೇತಿಯ ಮೂಲಕ ವಿನೋದ, ಸವಾಲು, ಸಾಹಸ, ಹೊಣೆಗಾರಿಕೆ ಮತ್ತು ಹಿತಕರ ಸಹವಾಸಗಳಿಗೆ ಧಾರಾಳ ಅವಕಾಶಗಳನ್ನು ಕಲ್ಪಿಸಿಕೊಡುತ್ತದೆ. ಪಂಡಿತ್ ಜವಾಹರ್‌ಲಾಲ್ ನೆಹರೂ ಅವರು 'ಗಂಡಾಂತರದಿಂದ ಬದುಕಿ' ಎಂದು ಹೇಳುತ್ತಿದ್ದುದುಂಟು. ನಮ್ಮ ಸ್ಕೌಟ್ ಮತ್ತು ಗೈಡ್‌ಗಳು ತಮ್ಮ ಬದುಕಿನಲ್ಲಿ ಅಂತಹ ಬಹಳಷ್ಟು ಸಾಹಸದ ಅನುಭವವನ್ನು ಪಡೆಯುತ್ತಾರೆ.

ಕೊನೆಯದಾಗಿ, ನಾನು ವೈಯಕ್ತಿಕವಾಗಿ ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಪರವಾಗಿ ಈ ಪ್ರಶಸ್ತಿಯನ್ನು ನೀಡಿದ ಸೌಜನ್ಯಕ್ಕಾಗಿ ಮತ್ತೊಮ್ಮೆ ಕೃತಜ್ಞತಾ ಭಾವವನ್ನು ವ್ಯಕ್ತಪಡಿಸುತ್ತೇನೆ. ಇಂದು ನೀಡಲ್ಪಟ್ಟಿರುವ ಈ ಪ್ರಶಸ್ತಿ ನಮ್ಮ ಮೇಲೆ ಹೆಚ್ಚಿನ ಹೊಣೆಗಾರಿಕೆಯನ್ನು ಹೊರಿಸಿದೆ ಮತ್ತು ಹೆಚ್ಚಿನ ಸವಾಲನ್ನು ಒಡ್ಡಿದೆ ಎಂಬ ಅರಿವು ನಮಗಿದೆ. ಮಾನ್ಯ ಪ್ರಧಾನಿಯವರೇ, ನಾವು ತಮಗೆ ಭರವಸೆ ನೀಡುತ್ತೇವೆ: ತಮ್ಮ ನಿರೀಕ್ಷೆಗೆ ತಕ್ಕಂತೆ ಕೆಲಸಮಾಡಿ, ಪೂಜ್ಯ ಇಂದಿರಾ ಗಾಂಧಿ ಅವರಿಗೆ ಅತ್ಯಂತ ಪ್ರಿಯವಾಗಿದ್ದ ಮೌಲ್ಯಗಳನ್ನು ಅಳವಡಿಸಿಕೊಂಡು ಅವುಗಳನ್ನು ಎತ್ತಿ ಹಿಡಿಯಲು ಸಾಧ್ಯವಾದ ಎಲ್ಲ ಪ್ರಯತ್ನಗಳನ್ನೂ ಮಾಡುತ್ತೇವೆ ಮತ್ತು ಸ್ಕೌಟ್ ಮತ್ತು ಗೈಡ್‌ನ ನಿಜವಾದ ಸ್ಫೂರ್ತಿಗೆ ಅನುಗುಣವಾಗಿ ಐಕ್ಯತೆ, ಪ್ರೇಮ ಮತ್ತು ವಿಶ್ವಾಸದ ಕ್ರಿಯಾಶೀಲ ಸಂದೇಶವಾಹಕರಾಗಿರುತ್ತೇವೆ.

---

"ನಾವೆಲ್ಲ ಯಾವುದೋ ಒಂದು ಧರ್ಮಕ್ಕೆ ಸೇರಿದ್ದೇವೆ. ಭಾರತದ ಯಾವುದೋ ಒಂದು ಭಾಗದಲ್ಲಿ ಜನಿಸಿದ್ದೇವೆ, ನಮಗೆ ಯಾವುದೋ ಒಂದು ನಿರ್ದಿಷ್ಟ ಮಾತೃಭಾಷೆಯಿದೆ. ಆದರೆ ಇವುಗಳಲ್ಲಿ ಯಾವುದೂ ನಮ್ಮ ಭಾರತೀಯತೆಗೆ ನಾವು ಭಾರತೀಯರಾಗಿರುವುದಕ್ಕೆ ಅಡ್ಡಿಯಾಗಬಾರದು".

— ಇಂದಿರಾ ಗಾಂಧಿ

"ಕೇವಲ ನಾವು ಸ್ವತಂತ್ರರಾಗಿದ್ದೇವೆ, ನಮಗೊಂದು ರಾಜ್ಯಾಂಗವಿದೆ ಎಂಬ ಕಾರಣದಿಂದ ಸಾಮಾಜಿಕ ಬಾಂಧವ್ಯ ತನ್ನಷ್ಟಕ್ಕೆ ತಾನು ಉಳಿಯುತ್ತದೆ ಎಂದು ನಾವು ಭಾವಿಸಬಾರದು. ಅದನ್ನು ನಾವು ರಕ್ಷಿಸಬೇಕು. ಹೊರಗಿನ ರಕ್ಷಣೆಗೆ ರಕ್ಷಣಾದಳಗಳಿವೆ. ಆದರೆ ಒಳಗಿನ ಈ ರಕ್ಷಣೆ ಎಲ್ಲ ನಾಗರೀಕರಿಂದ ಆಗಬೇಕು".

— ಇಂದಿರಾ ಗಾಂಧಿ

# ಸಿರಿಗೆರೆಯಲ್ಲಿ ಟ್ರೂಪ್ ಸ್ಕೌಟರ್, ಗೈಡ್ ಕ್ಯಾಪ್ಟನ್ ತರಬೇತಿ ಶಿಬಿರ

ಅಕ್ಟೋಬರ್ 4ರಿಂದ 10ರ ವರೆಗೆ ಚಿತ್ರದುರ್ಗ ಜಿಲ್ಲೆಯ ಸಿರಿಗೆರೆಯಲ್ಲಿ ದಾವಣಗೆರೆ ಜಿಲ್ಲಾ ಸಂಸ್ಥೆಯವರು ಪ್ರಾಥಮಿಕ ಟ್ರೂಪ್ ಸ್ಕೌಟರ್, ಪ್ಯಾಕ್ ಸ್ಕೌಟರ್, ಗೈಡ್ ಕ್ಯಾಪ್ಟನ್ ಮತ್ತು ಫ್ಲಾಕ್ ಲೀಡರುಗಳ ಶಿಬಿರಗಳನ್ನು ಪರಮಪೂಜ್ಯ ಶ್ರೀ ಡಾ॥ ಶಿವಮೂರ್ತಿ ಮಹಾಸ್ವಾಮಿಗಳು, ಶ್ರೀ ತರಳಬಾಳು ಬೃಹನ್ಮಠ ಇವರ ಆಶ್ರಯದಲ್ಲಿ ನಡೆಸಿದರು.



ಪ್ರಾರಂಭಿಕ ತರಬೇತಿ ಶಿಬಿರವನ್ನು ಅಕ್ಟೋಬರ್ 4ರಂದು ಸಿರಿಗೆರೆ ಶ್ರೀ ತರಳಬಾಳು ಜಗದ್ಗುರು ಪರಮಪೂಜ್ಯ ಡಾ। ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ ಆಶ್ರಯದಲ್ಲಿ ನಡೆದಾಗ ತೆಗೆದ ಚಿತ್ರ. ಜಗದ್ಗುರುಗಳ ಎಡಕ್ಕೆ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿ ಶ್ರೀ ಸುಧೀರ್ ಕುಮಾರ್ ಮತ್ತು ಬಲಕ್ಕೆ ಸಂಸ್ಥೆಯ ರಾಜ್ಯ ಕಾಯದರ್ಶಿ ಶ್ರೀ ಕೆ. ಬಿ. ಷಣ್ಮುಖಪ್ಪ ಅವರು ಇದ್ದಾರೆ.




ಶ್ರೀ ಆರ್. ಹೆಚ್. ಕಾನಡೆ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ, ಚಿತ್ರದುರ್ಗ ಅವರು ತರಬೇತಿ ಶಿಬಿರವನ್ನು ಉದ್ಘಾಟಿಸಿದಾಗ ತೆಗೆದ ಚಿತ್ರ. ಚಿತ್ರದಲ್ಲಿ ಬಲದಿಂದ ಎಡಕ್ಕೆ ಇರುವವರು ಶ್ರೀ ಪಂಡಿತಾರಾಧ್ಯ ಸ್ವಾಮಿಜಿ, ನಂತರ ರೋಟರಿ ಗೌರ್ನರ್ ಅನಂತರಾವ್ ದೇಶ್‌ಮುಖ್.

ದಾವಣಗೆರೆ ಮತ್ತು ಚಿತ್ರದುರ್ಗ ಸ್ಕೌಟ್ ಜಿಲ್ಲೆಗಳಿಂದ ಅಭ್ಯರ್ಥಿಗಳನ್ನು ಕೆಳಗಿನಂತೆ ಆಯ್ಕೆಮಾಡಲಾಗಿತ್ತು. ನಡೆಸಿದ ತರಬೇತಿ ಶಿಬಿರಗಳು ಕೆಳಗಿನಂತಿವೆ :

**1. ಪ್ರಾಥಮಿಕ ಟ್ರೂಪ್ ಸ್ಕೌಟರ್ಸ್ ಶಿಬಿರಗಳು :**

ಮೊದಲನೆಯ ಶಿಬಿರ : ಶ್ರೀ ಮರುಳ ಸಿದ್ದೇಶ್ವರ ತಂಡ....32 ಅಭ್ಯರ್ಥಿಗಳು. ನಾಯಕ—ಶ್ರೀ ಗುಡ್ಡಪ್ಪ, ಎಎಲ್‌ಟಿ (ಸ್ಕೌ). ಎರಡನೆಯ ಶಿಬಿರ : ಶ್ರೀ ತರಳಬಾಳು ತಂಡ....30 ಅಭ್ಯರ್ಥಿಗಳು. ನಾಯಕ—ಶ್ರೀ ಜಿ. ಎಸ್. ಚಂದ್ರ ಪ್ರಕಾಶ್, ಎಎಲ್‌ಟಿ (ಸ್ಕೌ). ಮೂರನೆಯ ಶಿಬಿರ : ಶ್ರೀ ಶಿವ ತಂಡ....32 ಅಭ್ಯರ್ಥಿಗಳು. ನಾಯಕ—ಶ್ರೀ ಮೊಹಮದ್ ವಾಸಿಲ್‌ಎಎಲ್‌ಟಿ (ಸ್ಕೌ)

**2. ಪ್ರಾಥಮಿಕ ಪ್ಯಾಕ್ ಸ್ಕೌಟರ್ಸ್ ಶಿಬಿರಗಳು :**

ಮೊದಲನೆಯ ಶಿಬಿರ : ನಾಯಕ—ಶ್ರೀ ಎಸ್. ಪಿ. ಪೂಣಚ್ಚ, ಎಲ್‌ಟಿ (ಸಿ)....28 ಅಭ್ಯರ್ಥಿಗಳು. ಎರಡನೆಯ ಶಿಬಿರ : ನಾಯಕ—ಶ್ರೀಮತಿ ಡಿ. ಸಾರಮ್ಮ, ಎಎಲ್‌ಟಿ(ಸಿ)....28 ಅಭ್ಯರ್ಥಿಗಳು.

**3. ಪ್ರಾಥಮಿಕ ಗೈಡ್ ಕ್ಯಾಪ್ಟನ್ಸ್ ಶಿಬಿರ :**

ನಾಯಕಿ—ಶ್ರೀಮತಿ ಶಾಂತಾ ಗಿರಿಯಣ್ಣ, ಎಲ್ ಟಿ (ಗೈ)....32 ಅಭ್ಯರ್ಥಿಗಳು.

**4. ಪ್ರಾಥಮಿಕ ಫ್ಲಾಕ್ ಲೀಡರ್ಸ್ ಶಿಬಿರ :**

ನಾಯಕಿ–ಶ್ರೀಮತಿ ನಿರ್ಮಲಾ ಕಲಾಶೆಟ್ಟಿ, ಎಎಲ್‌ಟಿ (ಗೈ)....15 ಅಭ್ಯರ್ಥಿಗಳು.

ಸಂಚಳ್ಳಿ ಮಠದ ಪೂಜ್ಯ ಶ್ರೀ ಪಂಡಿತಾರಾಧ್ಯ ಸ್ವಾಮೀಜಿಯವರ ಸಮ್ಮುಖದಲ್ಲಿ ಅಕ್ಟೋಬರ್ 4ರಂದು ಚಿತ್ರದುರ್ಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಶ್ರೀ ಆರ್. ಹೆಚ್. ಕಾನಡೆಯವರು ಶಿಬಿರಗಳನ್ನು ಉದ್ಘಾಟಿಸಿದರು. ಸಹಾಯಕ ರಾಜ್ಯ ಆಯುಕ್ತ (ಸ್ಕೌ) ಶ್ರೀ ಸಿ. ಆರ್. ಮೊಹಮದ್ ಜಾಹಿರುದ್ದೀನ್, ಚಿತ್ರದುರ್ಗ ಜಿಲ್ಲಾ ಆಯುಕ್ತೆ (ಗೈ) ಶ್ರೀಮತಿ ಸುಜಯ ಪ್ರಕಾಶ್ ಮತ್ತು ಸಹಾಯಕ ಜಿಲ್ಲಾ ಕಾರ್ಯದರ್ಶಿ ಶ್ರೀಮತಿ ಜಯಶ್ರೀ ಪ್ರಕಾಶ್ ಅವರು ಸಮಾರಂಭದಲ್ಲಿ ಹಾಜರಿದ್ದರು.

ಪರಮ ಪೂಜ್ಯ ಶ್ರೀ ಡಾ॥ ಶಿವಮೂರ್ತಿ ಮಹಾಸ್ವಾಮಿಗಳ ಸಮ್ಮುಖದಲ್ಲಿ ಅಕ್ಟೋಬರ್ 12ರಂದು ನಡೆದ ಶಿಬಿರಗಳ ಮುಕ್ತಾಯ ಸಮಾರಂಭದಲ್ಲಿ ಚಿತ್ರದುರ್ಗ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿ ಶ್ರೀ ಸುಧೀರ್ ಕುಮಾರ್ ಅವರು ಮುಕ್ತಾಯ ಭಾಷಣ ಮಾಡಿದರೆ, ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಬಿ. ಷಣ್ಮುಖಪ್ಪ ಅವರು ಅಧ್ಯಕ್ಷತೆ ವಹಿಸಿದ್ದರು.

"ಶ್ರೀ ಷಣ್ಮುಖಪ್ಪ ಅವರು ರಾಜ್ಯ ಸಂಸ್ಥೆಯ ಪರವಾಗಿ ಮಹಾಸ್ವಾಮಿಗಳಿಗೆ ಕೃತಜ್ಞತಾ ಪದಕ" ನೀಡಿದರು.

ಪದಕ ಸ್ವೀಕರಿಸಿದ ಮಹಾಸ್ವಾಮಿಗಳು ತಮ್ಮ ಭಾಷಣದಲ್ಲಿ ಶ್ರೀ ತರಳಬಾಳು ಜಗದ್ಗುರು ಶಿಕ್ಷಣ ಸಂಸ್ಥೆಯವರು ನಡೆಸುವ ಎಲ್ಲಾ ಶಾಲಾಕಾಲೇಜುಗಳಲ್ಲಿಯೂ ಸ್ಕೌಟ್ ಮತ್ತು ಗೈಡ್ ಘಟಕಗಳನ್ನು ಆರಂಭಿಸಲು ನಿರ್ದೇಶನ ನೀಡವುದಾಗಿ ಹೇಳಿದರು.

ಶ್ರೀ ಎನ್. ಎಂ. ಗುರುಸ್ವಾಮಿ, ಎಲ್ ಟಿ (ಸಿ) ಅವರು ಎಲ್ಲಾ ಕಾರ್ಯಕ್ರಮಗಳ ಸಮನ್ವಯ ಮಾಡಿದರು.

---

## ಪುತ್ತೂರಿನಲ್ಲಿ ಸಮಗ್ರತಾ ರಾಷ್ಟ್ರೀಯ ಭಾವೈಕ್ಯತಾ ಶಿಬಿರ

ಪುತ್ತೂರಿನ ಸಂತ ಫಿಲೋಮಿನಾ ಬಾಲಕರ ಪ್ರೌಢ ಶಾಲಾ ಆವರಣದಲ್ಲಿ ಅಕ್ಟೋಬರ್ 2ರಿಂದ 5ರ ವರೆಗೆ ಅಲ್ಲಿನ ತಹಸೀಲ್ದಾರ್ ಶ್ರೀ ಜೆ. ಆರ್. ಲೋಬೋ ಅವರು ಮುಖ್ಯ ಅತಿಥಿಗಳಾಗಿದ್ದರೆ ಜಿಲ್ಲಾ ಆಯುಕ್ತ (ಸ್ಕೌ) ಶ್ರೀ ಸಿ. ಪಿ. ಕರಿ ಅವರು ಸಮಗ್ರತಾ ರಾಷ್ಟ್ರೀಯ ಭಾವೈಕ್ಯತಾ ಶಿಬಿರವನ್ನು ಉದ್ಘಾಟಿಸಿದರು.

ಅಂತರ ರಾಷ್ಟ್ರೀ ಯ ಸಂಸ್ಥೆಯಾದ ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿ ಭಾಗವಹಿಸುವ ಅವಕಾಶ ಎಲ್ಲರಿಗೂ ಸಿಗುವುದಿಲ್ಲ ಎಂದ ಮುಖ್ಯ ಅತಿಥಿಗಳು ಸಿಕ್ಕವರು ಅದರ ಸದುಪಯೋಗ ಪಡೆಯಬೇಕು ಎಂದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೇಶವ ಭಟ್ ಸ್ವಾಗತಿಸಿದರೆ, ಶ್ರೀ ವಸಂತ ಕುಮಾರ್ ವಂದನೆ ಸಲ್ಲಿಸಿದರು.

ಶಿಬಿರದಲ್ಲಿ 72 ಸ್ಕೌಟ್ಸ್, 77 ಗೈಡ್ಸ್, 60 ಕಬ್ಸ್ ಬುಲ್‌ಬುಲ್ಸ್, 3 ಗೈಡರ್ಸ್, 2 ಸ್ಕೌಟರ್ಸ್, 15 ರೋವರ್ಸ್‌ಗಳ ಜೊತೆಗೆ ಒಬ್ಬ ಲೇಡಿ ಕಬ್ ಮಾಸ್ಟರ್ ಭಾಗವಹಿಸಿದ್ದರು. ಪ್ರಥಮ ಸೋಪಾನ, ದ್ವಿತೀಯ ಸೋಪಾನ ವಿಷಯಗಳನ್ನು ತಿಳಿಸಿದ ನಂತರ ಮೊದಲನೆಯ ದಿನ ಅಲ್ಲಿನ ಮುಖ್ಯ ಬೀದಿಗಳಲ್ಲಿ ಸಂಸ್ಥೆಯ ಧ್ಯೇಯ ಫಲಕಗಳನ್ನು ಹಿಡಿದು ಮಕ್ಕಳು ಪಥ ಚಲನೆ ಮಾಡಿದರು. ಶ್ರೀಮತಿ ಮತ್ತು ಶ್ರೀ ದಯಾನಂದ ಶೆಣೈ ಅವರು ಮಕ್ಕಳಿಗೆ ಸಿಹಿ ಮತ್ತು ತಂಪು ಪಾನೀಯ ಹಂಚಿದರು.

ಮರುದಿನ ಬೆಳಿಗ್ಗೆ ಸಾಮೂಹಿಕ ಪ್ರಾರ್ಥನೆಯ ನಂತರ ಧ್ವಜಾರೋಹಣ ಮಾಡಿ ನಂತರ ಸಮೀಪದ

ರಾತ್ರಿ ನಡೆದ ಭವ್ಯ ಶಿಬಿರಾಗ್ನಿಯನ್ನು ರೋಟರಿ ಅಧ್ಯಕ್ಷ ಶ್ರೀ ಕೆ. ರತ್ನಾಕರ ಶೆಣೈ ಅವರು ಉದ್ಘಾಟಿಸಿದರು. ವರುಮಲ ಬೆಟ್ಟಕ್ಕೆ ಹೊರ ಸಂಚಾರ ನಡೆಸಿ ಮಕ್ಕಳಿಗೆ ಪ್ರಕೃತಿ ವೀಕ್ಷಣೆ, ಕಂಪಾಸ್ ಹಾಗೂ ಎಸ್ಟಿಮೇಷನ್ ತಿಳಿಸಲಾಯಿತು.

ಅಂದು ಸಂಜೆ ನಡೆದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಪುರಸಭೆ ಅಧ್ಯಕ್ಷ ಶ್ರೀ ರಾಮಚಂದ್ರ ಶೆಣೈ ವಹಿಸಿದ್ದರೆ, ಜಿಲ್ಲಾ ಆಯುಕ್ತೆ (ಗೈ) ಸಿಸ್ಟರ್ ಲಿಡಿಯಾ ಫರ್ನಾಂಡೀಸ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಕ್ಕಳಿಗೆ ಹಿತವಚನ ನೀಡಿದರು.

ಅಕ್ಟೋಬರ್ 5ರ ಬೆಳಿಗ್ಗೆ 10 ಗಂಟೆಗೆ ಧ್ವಜ ಅವರೋಹಣ ಮಾಡಿದ ನಂತರ ಶಿಬಿರ ಮುಕ್ತಾಯ ವಾಯಿತು.

## ಸ್ಕೌಟ್, ಕಬ್ ಶಿಕ್ಷಕರ ತರಬೇತಿ ಸಮಾರಂಭ

ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಆಶ್ರಯದಲ್ಲಿ ಮಂಗಳೂರಿನ ಶಿಕ್ಷಕ ತರಬೇತಿ ಸಂಸ್ಥೆ ಆವರಣದಲ್ಲಿ ಸೆಪ್ಟೆಂಬರ್ 30ರಿಂದ ಅಕ್ಟೋಬರ್ 2 ರವರೆಗೆ ಜಿಲ್ಲಾ ಮಟ್ಟದ ಪ್ರಾಥಮಿಕ ಸ್ಕೌಟ್ ಮತ್ತು ಕಬ್ ಶಿಕ್ಷಕರ ತರಬೇತಿ ಶಿಬಿರ ನಡೆಯಿತು.

ಅ. 1ರ ಸಂಜೆ ನಡೆದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಶ್ರೀ ಗಣಪತಿ ಪೈ ವಹಿಸಿದ್ದರು. ಜಿಲ್ಲಾ ಸಂಸ್ಥೆ ಉಪಾಧ್ಯಕ್ಷೆ ಶ್ರೀಮತಿ ಭಾರತಿ ಶಣವ ಸ್ವಾಗತಿಸಿದರೆ, ಶಿಬಿರದ ನಾಯಕರಾದ ಸರ್ವಶ್ರೀ ವಾಲ್ಟರ್ ಜೆ. ಪಿಂಟೋ, ರಮೇಶಾಚಾರ್ ಮತ್ತು ದೇವದಾಸ್ ಭಟ್ ಅವರು ಶಿಬಿರದ ವರದಿಯನ್ನು ಓದಿದರು. ಶಿಬಿರಾರ್ಥಿಗಳು ತಮ್ಮ ಅನುಭವವನ್ನು ವ್ಯಕ್ತಪಡಿಸಿದರು, ಹಿಂದಿನ ಜಿಲ್ಲಾ ಆಯುಕ್ತರಾದ ಡಾ। ಬಾಲಪ್ಪ ಶೆಟ್ಟಿ ಮತ್ತು ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿ, ಪ್ರಸಕ್ತ ಆಯುಕ್ತ ಸಿ. ಪಿ. ಕರಿ, ಜಿಲ್ಲಾ ಕಾರ್ಯದರ್ಶಿ ಐ. ಎ. ಕೈರಣ್ಣ, ಸಹಾಯಕ ಜಿಲ್ಲಾ ಆಯುಕ್ತ ವೆಂಕಟರಮಣ ಆಚಾರ್, ಎ ಎಸ್ ಒ ಸಿ (ಎಸ್) ನಾರಾಯಣ ಶೆಟ್ಟಿ ಅವರು ಉಪಸ್ಥಿತರಿದ್ದರು.

ಸರ್ವಶ್ರೀ ವಾರಂಬಳಿ, ಉಮೇಶ್, ಪಿ. ಜಿ, ಪಂಡಿತ್, ಗುಣಕರ ಶೆಟ್ಟಿ, ರಾಮರಾವ್, ಮತ್ತು ಶ್ರೀಮತಿಯರಾದ ಜೋನ್ ಮಂತೇರೋ, ರುಕ್ಮಿಣಿ ಅವರು ಸಹಾಯಕರಾಗಿ ಶಿಬಿರದಲ್ಲಿ ಸೇವೆ ಸಲ್ಲಿಸಿದರೆ, ಜಿಲ್ಲಾ ತರಬೇತಿ ಆಯುಕ್ತ ಗೋಪಾಲಕೃಷ್ಣ ಭಟ್ ಅವರು ಶಿಬಿರವನ್ನು ಸುವ್ಯವಸ್ಥೆಯಿಂದ ಸಂಘಟಿಸಿದ್ದರು.

ಸ್ಕೌಟ್ ಮಾಸ್ಟರ್ ತರಬೇತಿಗೆ 31 ಶಿಕ್ಷಕರು, ಲೇಡಿ ಕಬ್ ಮಾಸ್ಟರ್ ತರಬೇತಿಗೆ 18 ಶಿಕ್ಷಕಿಯರು ಮತ್ತು ಕಬ್ ಮಾಸ್ಟರ್ ತರಬೇತಿಗೆ 37 ಟಿ. ಸಿ. ಎಚ್. ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಪೌರತನ ಶಿಬಿರವನ್ನು ಸಂಘಟಿಸಲಾಗಿತ್ತು, ತರಬೇತಿ ಸಂಸ್ಥೆಯ ಆವರಣವನ್ನು ಸ್ವಚ್ಛಗೊಳಿಸಲಾಯಿತು.

ಮಹಾತ್ಮ ಗಾಂಧಿ ಜಯಂತಿಯಾದ ಅಕ್ಟೋಬರ್ 2ರಂದು ನಡೆದ ಮುಕ್ತಾಯ ಸಮಾರಂಭದಲ್ಲಿ ಜಿಲ್ಲಾ ಆಯುಕ್ತ ಸಿ. ಪಿ. ಕರಿ ಮತ್ತು ಕಾರ್ಯದರ್ಶಿ ಐ. ಎ. ಕೈರಣ್ಣ ಅವರು ಭಾಗವಹಿಸಿದ್ದರು.

## ಮಾಯಸಂದ್ರದಲ್ಲಿ ರಾಜ್ಯೋತ್ಸವ

ತುಮಕೂರು ಜಿಲ್ಲೆಯ ಮಾಯಸಂದ್ರದ ಮಹಾತ್ಮ ಗಾಂಧಿ ಮುಕ್ತ ಸ್ಕೌಟ್ ಮತ್ತು ಗೈಡ್ ತಂಡದವರು ನವೆಂಬರ್ ೧ರಂದು ಕರ್ನಾಟಕ ರಾಜ್ಯೋತ್ಸವ ಆಚರಿಸಿದರು.

ಸ್ವಾತಂತ್ರ್ಯ ಹೋರಾಟಗಾರ ಶ್ರೀ ಎಂ. ಹೆಚ್. ನರಸಿಂಹಯ್ಯ ಅವರು ಬೆಳಿಗ್ಗೆ ೮–೩೦ಕ್ಕೆ ಸ್ಕೌಟ್ ಧ್ವಜಾರೋಹಣ ಮಾಡಿ ಸಂಸ್ಥೆಗೆ ಶ್ರೀಮತಿ ಇಂದಿರಾ ಗಾಂಧಿ ರಾಷ್ಟ್ರೀಯ ಐಕ್ಯತಾ ಪ್ರಶಸ್ತಿ ಬಂದಿರುವುದನ್ನು ವಿವರಿಸಿದರು.

ಸ್ಕೌಟ್ ಮಾಸ್ಟರ್ ಎಂ. ಜೆ. ಉಮರದರಾಜ್ ಅವರು ಕಾರ್ಯಕ್ರಮ ನಿರೂಪಿಸಿದರು.

೧೫ ವರ್ಷದ ಕೆಳಗಿನ ಮಕ್ಕಳಿಗೆ ಟೆನಿಸ್ ಬಾಲ್ ಕ್ರಿಕೆಟ್ ಸ್ಪರ್ಧೆ ಏರ್ಪಡಿಸಲಾಗಿದ್ದು ೮ ತಂಡಗಳು ಭಾಗವಹಿಸಿದ್ದವು. ಮಹಾತ್ಮಗಾಂಧಿ ಸ್ಕೌಟ್ ತಂಡ ವಿಜಯ ಗಳಿಸಿದರೆ, ಆ ನಡಗು ಗ್ರಾಮದ ತಂಡ ಎರಡನೇ ಸ್ಥಾನ ಗಳಿಸಿತು.

ತಂಡದ ಅಧ್ಯಕ್ಷ ಮಾ. ಸು. ಅನಂತ ಅವರು ಬಹುಮಾನ ವಿತರಣೆ ಮಾಡಿದರು.

## ನೇಮಕ

ರಾಜ್ಯ ಮುಖ್ಯ ಆಯುಕ್ತರು ಮಂಗಳೂರಿನ ಸೆಂಟ್ ಅಲಾಯ್ಸಿಯಸ್ ಸಂಜೆ ಕಾಲೇಜಿನ ಪ್ರಿನ್ಸಿಪಾಲ್ ಶ್ರೀಮತಿ ಲೀನಾ ಫೆರ್ನಾಂಡಿಸ್ ಅವರನ್ನು ಮಂಗಳೂರು ವಿಶ್ವವಿದ್ಯಾಲಯ ಜಿಲ್ಲೆಯ ಆಯುಕ್ತೆ (ಗೈ) ಆಗಿ ೧೯೯೮ರ ಮಾರ್ಚ್ ೩೧ರ ವರೆಗೆ ನೇಮಿಸಿದ್ದಾರೆ.

## ಚಿಕ್ಕಮಗಳೂರು ಜಿಲ್ಲಾ ಸಂಸ್ಥೆಯ ವಾರ್ಷಿಕ ಸಭೆ

ಚಿಕ್ಕಮಗಳೂರು ಜಿಲ್ಲಾ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಸಾಮಾನ್ಯ ವಾರ್ಷಿಕ ಸಭೆಯು ಜಿಲ್ಲಾ ಸಂಸ್ಥೆ ಅಧಕ್ಷ ಹಾಗೂ ಜಿಲ್ಲಾಧಿಕಾರಿ ಶ್ರೀ ವಿ. ಉಮೆಶ್, I.A.S. ಅವರ ಅಧ್ಯಕ್ಷತೆಯಲ್ಲಿ ಸೆ. 5ರಂದು ನಡೆಯಿತು.

ಸಾಮೂಹಿಕ ಪ್ರಾರ್ಥನೆಯಾದ ನಂತರ ಜಿಲ್ಲಾ ಆಯುಕ್ತ (ಸ್ಕೌ) ಎ. ಡಿ. ಚಂದ್ರಶೇಖರ್ ಸ್ವಾಗತಿಸಿದರು. ಜಿಲ್ಲಾ ಕಾರ್ಯದರ್ಶಿ ಹೆಚ್. ಕೆ. ಅಣ್ಣಪ್ಪ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳನ್ನು ಮಂಡಿಸಿದರೆ, ಜಿಲ್ಲಾ ತರಬೇತಿ ಆಯುಕ್ತ (ಸ್ಕೌ) ಎಂ. ಹಲಗಪ್ಪನವರು ಮುಂಗಡ ಆಯುವ್ಯಯ ಮತ್ತು ಮುಂದೆ ಕೈಗೊಳ್ಳಲಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ವಿವರಣೆ ನೀಡಿದರು.

ಜಿಲ್ಲಾ ಸಂಸ್ಥೆಯ ಕಾರ್ಯ ಚಟುವಟಿಕೆಗಳನ್ನು ವಿಶ್ಲೇಷಿಸಿದ ಜಿಲ್ಲಾಧಿಕಾರಿ ವಿ. ಉಮೇಶ್ ಅವರು ಇನ್ನೂ ಹೆಚ್ಚಿನ ಕಾಯಕ್ರಮಗಳನ್ನು ಕೈಗೊಳ್ಳಲು ಸೂಕ್ತ ಸಲಹೆಗಳನ್ನು ನೀಡಿದರು.

ಜಿಲ್ಲಾ ಕಾರ್ಯದರ್ಶಿ ಅಣ್ಣಪ್ಪನವರು ವಂದನೆ ಅರ್ಪಿಸಿದರು.

## ಮಾರ್ಗದರ್ಶನ

ತುಮಕೂರಿನ ಹನುಮಾನ್ ರೋವರ್ಸ್ ದಳದ ನಾಲ್ವರು ಆಗಸ್ಟ 6ರಂದು ಸೈಕಲ್ ಮೇಲೆ 'ಪೆಡ್ಲಿಂಗ್ ಫಾರ್ ಪ್ಲೆಷರ್' ಕಾರ್ಯಕ್ರಮದಂತೆ ಇಲ್ಲಿಗೆ ಭೇಟಿ ನೀಡಿದಾಗ ಜಿಲ್ಲಾ ತರಬೇತಿ ಆಯುಕ್ತ (ಸ್ಕೌ) ಎಂ. ಹಲಗಪ್ಪ ಮತ್ತು ಜಿಲ್ಲಾ ಕಾರ್ಯದರ್ಶಿ ಅಣ್ಣಪ್ಪನವರು ಅವರನ್ನು ಸ್ವಾಗತಿಸಿ, ಮುಂದಿನ ಪ್ರವಾಸದ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಿ ಅವರಿಗೆ ಉಪಾಹಾರ ನೀಡಲಾಯಿತು.

## ಹೊನ್ನಾವರದಲ್ಲಿ ತರಬೇತಿ ಶಿಬಿರ

ಹೊನ್ನಾವರದ ಮಾರ್ಥೋಮಾ ಮಿಷನ್ ಸೆಂಟರ್‌ನಲ್ಲಿ ಅಕ್ಟೋಬರ್ 1ರಂದು ನಡೆದ ತರಬೇತಿ ಶಿಬಿರದಲ್ಲಿ ಅಲ್ಲಿನ 6 ಶಾಲೆಗಳಿಂದ 120 ಸ್ಕೌಟ್ ಮತ್ತು ಗೈಡ್‌ಗಳು ಪಾಲ್ಗೊಂಡಿದ್ದರು.

ಧ್ವಜಾರೋಹಣದಿಂದ ಆರಂಭವಾದ ಈ ಶಿಬಿರವನ್ನು ಹಿರಿಯ ಸ್ಕೌಟ್ ಮಾಸ್ಟರ್ ವಿ. ವಿ. ನಾಯಕ್ ವಹಿಸಿದ್ದರೆ 10 ಸ್ಕೌಟರ್ ಮತ್ತು ಗೈಡರ್‌ಗಳು ಭಾಗವಹಿಸಿ ಹೆಚ್ಚಿನ ಅನುಭವ ಪಡೆದು ಕೊಂಡರು.

ಸ್ಥಳೀಯ ಕಾರ್ಯದರ್ಶಿ ಬಿ. ಡಿ. ಫರ್ನಾಂಡಿಸ್ ಸಮಾರೋಪ ಭಾಷಣ ಮಾಡಿದರು.

---

## SHARING AND CARING OUR VISION FOR TOMORROW'S WORLD

Mrs. Janaki Venugopal, Asst. State Organising Comissioner (G) was one of the 3 participants selected from India to participate in the Asia Pacific Training for Leaders/Guiders held at New Zealand from 4th to 12th September 1988. There were 46 delegates drawn from 20 countries who took part in this event. The opening ceremony was held on 4-9-1988. Leaders of all participating countries were asked to go near the "Tree of Life" on which each one was asked to hang a Card with a message of "one hopes for a better world for tomorrow." The course was officially inaugurated by Mrs. Mary Hopkrik, CBE Member of World Committee.

Smt. Janaki was selected to talk about how the Scout and Guide Movement in India functioning as a unified organisation, and also she was asked to talk about Bulbul section in India. She demonstrated one of Indian games namely "Khokho" and conducted the game to all the participants.

She was given an opportunity to talk on sharing the skill and expertise in planning, the programme and resources and public relations. She participated in the International Bazaar and gave a display of Indian Dance.

During the period of the course, they were taken to Wellington and they visited Government House, Governor General's House, Parliament and Wellington Province Centre. There were group discussions on the various subjects and she gave a talk on "What makes up culture". They discussed how our Guides Training helped and other women to advance showing the skills of handicrafts etc., Different sections of groups were asked to prepare the thinking day programme based on the theme Peace.

On her way back to India, she visited Tokyo, Hongkong and Bangkok.

# ನಿಮ್ಮ ಮಗುವನ್ನು ರೋಗದಿಂದ ರಕ್ಷಿಸಿ

ಹುಟ್ಟಿದ ದಿನದಿಂದಲೇ ನಿಮ್ಮ ಮಗುವು ಅನೇಕ ಆರೋಗ್ಯದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅಲ್ಲದೆ, ಮಗುವು ಹಲವಾರು ಸಾಂಕ್ರಮಿಕ ರೋಗಗಳಿಗೆ ತುತ್ತಾಗುವ ಸಾಧ್ಯತೆ ಇರುತ್ತದೆ.

ಮಗುವಿನಲ್ಲಿ ರೋಗ ನಿರೋಧಕ ಶಕ್ತಿ ಸ್ವಾಭಾವಿಕವಾಗಿ ಕಡಿಮೆ ಇರುತ್ತದೆ. ಎಂತಲೇ, ನಿಮ್ಮ ಮಗುವನ್ನು ರೋಗಗಳಿಗೆ ತುತ್ತಾಗದಂತೆ ಕಾಪಾಡುವುದು ಅತ್ಯಂತ ಅವಶ್ಯಕ; ನಿಮ್ಮ ಮಗುವಿಗೆ ರೋಗನಿರೋಧಕ ಚುಚ್ಚುಮದ್ದುಗಳನ್ನು ಕೊಡಿಸಿ.

ಕ್ಷಯ, ಗಂಟಲುಬೇನೆ, ನಾಯಿಕೆಮ್ಮು, ಹಾಗೂ ಮೀಸಲ್ಸ್ (ಗೊಬ್ಬರ) ಈ ರೋಗಗಳನ್ನು ನಿಮ್ಮ ಮಗುವಿಗೆ ಒಂದು ವರ್ಷದೊಳಗೆ ಚುಚ್ಚುಮದ್ದುಗಳನ್ನು ಹಾಕಿಸಿ, ಹಾಗೂ ಪೋಲಿಯೋ ತಡೆಯಲು 'ತೊಟ್ಟು' ಔಷಧಿಯನ್ನು ಕೊಡಿಸಿ.

| ಮಗುವಿನ ವಯಸ್ಸು | ಕೊಡಬೇಕಾದ ಲಸಿಕೆ | ಪ್ರಮಾಣ |
|---|---|---|
| 3ರಿಂದ 9 ತಿಂಗಳು | ಅ) ತ್ರಿರೋಗ—ಅಂದರೆ ಧನುರ್ವಾಯು, ನಾಯಿ ಕೆಮ್ಮು, ಗಂಟಲು ಬೇನೆಗಳ ವಿರುದ್ಧ | 3 ಬಾರಿ. 1ರಿಂದ 2 ತಿಂಗಳ ಅಂತರದಲ್ಲಿ |
| | ಆ) ಪೋಲಿಯೋ (ಅಂಗವಿಕಲತೆ) | 3 ಬಾರಿ. 1ರಿಂದ 2 ತಿಂಗಳ ಅಂತರದಲ್ಲಿ |
| | ಇ) ಕ್ಷಯರೋಗ ವಿರುದ್ಧ—ಬಿಸಿಜಿ | ಒಂದು ಬಾರಿ |
| 9 ರಿಂದ 12 ತಿಂಗಳು | ಮೀಸಲ್ಸ್ | ಒಂದು ಬಾರಿ |

ಹೆಚ್ಚಿನ ವಿವರಗಳಿಗೆ :

ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ,
ಕರ್ನಾಟಕ ಸರ್ಕಾರ,
ಬೆಂಗಳೂರು—ಇವರನ್ನು ಸಂಪರ್ಕಿಸಿ

**'ಕರ್ನಾಟಕ ವಾರ್ತೆ'**

# CIVIL DEFENCE

Over the years the importance of Civil Defence has been largely ignored and even today the professionals within the Civil Defence organisation have a struggle to be taken seriously and listened to. Their dedication is beginning now to bring a new awareness to the fact that a major emergency could occur anywhere at any time and we must all be prepared. The argument or mistaken belief perhaps, that "it won't happen to me" is no longer valid.

Perhaps more than anything else Baden-Powell wanted his Scouts to Be Prepared but how many of us really are prepared for a Civil Defence Emergency. Have you read the back pages of your phone book, do you know where your nearest Civil Defence Post is, what is the name of your Civil Defence Warden, in the event of an emergency what would you take with you, how would you deal with the kind of situations you are likely to meet during an emergency and what skills would you, as a Scout be able to offer the authorities?

Pretty much everything you have learnt as a Scout is a valuable skill which can be used positively during an emergency.

During an emergency your first duties would be to yourself and to your family, but once you have seen to them, Scouts do have skills which can be used by the authorities to help everyone and as Scouts, we are almost honour bound to see that we do make efforts to see our skills are used.

This is what Scouting is all about . . . learning and developing skills which are of use to us personally and in the community and being prepared to put these skills to good use at any time.

During an emergency people should first look after themselves and those near by and, depending on how bad the situation is, to the nearest assembly point.

At the assembly point volunteers may be given tasks according to their skills and you can imagine the look of thanks on the face of an official when a fully-trained Scout carrying all the gear he thinks will be needed turns up at an assembly point and offers his services.

**POSTS**

Where is your nearest Civil Defence Post and which is the quickest way you have of getting to it?

If you don't know the answer to these questions then find out as soon as you can.

The address is likely to be a near by church or school and can be identified by a Civil Defence sticker or sign on the building.

You should also get to know the lay-out of the building and what equipment is available there and what equipment of your own you could bring with you.

Also, get to know your Civil Defence Warden. He or she is likely to be some one living close to the Post and would be more than pleased to meet you, and he made aware of what you can offer before, rather than after, an emergency occurs.

## ACTIVITY

As a Troop or unit you could carry out valuable community service by introducing yourselves to the Warden and offering your services in the maintenance of the Post. Also, it is likely that many of your neighbours are unaware of where exactly the post and informing these people, either by visiting the personally or dropping a cheaply produced pamphlet in their letter box is a valuable exercise.

## WHERE WILL YOU BE?

You could be fast asleep at home, at school, at work, and socialising, in fact anywhere, so it is essential that you really are prepared.

At school or work, find out where the Civil Defence equipment is stored and if there is not any, suggest to those in charge that perhaps there should be. A Government Act now requires that all Government Departments have available full and complete Civil Defence kits which are easily accessible.

Most schools throughout the country are Civil Defence posts and they are also required to have available Civil Defence kits.

Arrange with those responsible for the kits to see that they are maintained and that the equipment is kept in at least working condition. There may be times when you come up against the "it will never happen" attitude in which case see if you can't take it upon yourself to be responsible for looking after the equipment for when it does happen.

All Scouts should be encouraged to get to know their neighbourhood, the main roads, the quickest way to the hall etc.

